MOOG

# ಸಂಸ್ಕೃತಿ ಮತ್ತು ಮೌಲ್ಯಗಳು



# MOOG ತತ್ವಗಳು

“ಮೂಗ್ ನಲ್ಲಿನ ನಮ್ಮ ತತ್ವಗಳು ಅತ್ಯಂತ ಸರಳ. ನಮಗಾಗಿ ಕೆಲಸ ಮಾಡುವ ಜನರನ್ನು ನಾವು ಸಂಪೂರ್ಣವಾಗಿ ನಂಬುತ್ತೇವೆ. ಪರಸ್ಪರ ನಂಬಿಕೆ ಮತ್ತು ವಿಶ್ವಾಸದ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲರಿಗೂ ಅವರ ಕೆಲಸ  ಲಾಭದಾಯಕ ಮತ್ತು ತೃಪ್ತಿಕರವಾಗಿರುತ್ತದೆ ಎಂಬುದು ನಮ್ಮ ನಂಬಿಕೆ.”

Bill Moog

ಸಂಸ್ಥೆಯ ಸಂಸ್ಥಾಪಕ, 1951

ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, 1951 - 1988



# MOOG ಸಂಸ್ಕೃತಿ

"ನನ್ನ ಅಭಿಪ್ರಾಯದಲ್ಲಿ, ನಮ್ಮ ಸಂಸ್ಥೆಯ ಅಸಾಮಾನ್ಯ, ಅಸಂಪ್ರದಾಯಕ ಸಂಸ್ಕೃತಿಯೇ ನಮ್ಮ ಏಕೈಕ ಅತಿಮುಖ್ಯ ಆಸ್ತಿ. ಕೆಲವು ಸಂದರ್ಭಗಳಲ್ಲಿ ನಮ್ಮ ಸಂಸ್ಥೆಗೆ ಜನರನ್ನು ಕರೆತರುವುದು ಈ ಅಂಶವೇ. ಹಲವು ಸಂದರ್ಭಗಳಲ್ಲಿ ಅತ್ಯುತ್ತಮ ಜನರು ನಮ್ಮ ಸಂಸ್ಥೆಯಲ್ಲಿ ಉಳಿದಿರುವುದು ಇದೇ ಕಾರಣದಿಂದಾಗಿ."

Bob Brady

ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,1988 - 2010

# MOOG ಮೌಲ್ಯಗಳು - ಜಾನ್ ರಿಂದ ಒಂದು ಸಂದೇಶ



Bill MOOG ರವರು ನಮ್ಮ ಅತ್ಯುನ್ನತ Moog ಸಂಸ್ಥೆಯನ್ನು ಸ್ಥಾಪಿಸಿದಾಗ, ಸಂಸ್ಥೆಯ ಆಂತರಿಕ ಸಂಸ್ಕೃತಿಯ ಬಗ್ಗೆ ಮತ್ತು ಇದು ಹೇಗೆ ಎಲ್ಲರ ಮೇಲೆ ಪ್ರಭಾವ ಬೀರಬಲ್ಲದು ಎಂಬುದನ್ನು ತೀಕ್ಷ್ಣವಾಗಿ ಅರಿತಿದ್ದರು. ವೈಯುಕ್ತಿಕ ಹಾಗೂ ವೃತ್ತಿಯಲ್ಲಿನ ಜೀವನಾನುಭವಗಳು ಮಾತ್ರವಲ್ಲ, ಪ್ರವೃತ್ತಿಗಳು ಹಾಗೂ ಸಾಮಾಜಿಕ ಮನಃಶಾಸ್ತ್ರಜ್ಞ Douglas McGregor ರ ವ್ಯಚಾರಿಕ ಪ್ರಭಾವಗಳು ಇವರ ದೃಷ್ಟಿಕೋನಕ್ಕೆ ಸ್ಪಷ್ಟ ರೂಪ ನೀಡಿದ್ದವು.

ತಮ್ಮ ವೃತ್ತಿಜೀವನದ ಆರಂಭದಲ್ಲಿ Bill ಒಂದು ಸಂಸ್ಥೆಗಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ, ಅವರಿಗೆ ತಾವು ಯಾರಿಂದಲೋ ನಿರ್ವಹಿಸಲ್ಪಡುತ್ತಿರುವಂತೆ, ನಿರ್ದೇಶಿಸಲ್ಪಡುತ್ತಿರುವಂತೆ ಮತ್ತು ನಿಯಂತ್ರಿಸಲ್ಪಡುತ್ತಿರುವಂತಹ ಅನುಭವ ಮೂಡಿಸಿತ್ತು. MOOG ಸಂಸ್ಥೆಯನ್ನು ಇವರು ಸ್ಥಾಪಿಸಿದಾಗ, ತಮ್ಮ ಈ ಸಂಸ್ಥೆಯ ವಾತಾವರಣ ಇಂತಹುದಾಗಿರಬಾರದು ಎಂಬುದು ಅವರಿಗೆ ತಿಳಿದಿತ್ತು. ಬದಲಾಗಿ ಇವರು ಒಂದು ಸಹೋದ್ಯೋಗಿ ವಾತಾವರಣವನ್ನು ರಚಿಸಲು ಮುಂದಾಗಿ, ಇಲ್ಲಿ ಜನರು ತಮ್ಮ ಸೃಜನಶೀಲತೆ ಮತ್ತು ಮುಂದಾಳತ್ವದ ಕೌಶಲ್ಯಗಳನ್ನು ಕಾರ್ಯಗತಗೊಳಿಸಲು ಮುಕ್ತವಾಗಿರುವಂತಹ ಮತ್ತು ತಮ್ಮ ಕರ್ತವ್ಯ ನಿರ್ವಹಿಸಲು ಇಷ್ಟಪಡುವಂಥ ವಾತಾವರಣದ ಕಾರ್ಯಸ್ಥಳದ ಸೃಷ್ಟಿ ಇವರ ಆಶಯವಾಗಿತ್ತು. ಜನರು ಸಾಧ್ಯವಾದ ಮಟ್ಟಿಗೆ ತಮಗೆ ಅತ್ಯುತ್ತಮವೆನಿಸಿದ ಕೆಲಸಗಳನ್ನು ಮಾಡಿದಾಗ ಅವರು ಅದರಿಂದ ಅತ್ಯಂತ ತೃಪ್ತಿ ಪಡೆಯುತ್ತಾರೆ ಮತ್ತು ಇಂತಹ ಕೆಲಸದಿಂದ ಅವರು ಹೆಮ್ಮೆ ಪಡುತ್ತಾರೆ (Mc Gregor ನ ವೈ ಸಿದ್ಧಾಂತ); ಕೆಲಸವನ್ನು ಒಂದು ಹೊರೆಯಾಗಿ ನೋಡಲಿದ್ದು, ಈ ಕೆಲಸವನ್ನು ಕೇವಲ ತಮ್ಮ ಅಸ್ತಿತ್ವಕ್ಕಾಗಿ ಮಾಡುತ್ತಾರೆ (Mc Gregor ನ ಎಕ್ಸ್ ಸಿದ್ಧಾಂತ) - McGregor ನ ಈ ಸಿದ್ಧಾಂತಗಳನ್ನೂ ಸಹ ಬಿಲ್ ನಂಬಿದ್ದರು. ಈ ಎಲ್ಲ ಕಲ್ಪನೆಗಳು ಹಾಗೂ ನಂಬಿಕೆಗಳು ನಮ್ಮ ಮೂಗ್ ಸಂಸ್ಥೆಯ ಮೂಲ ಮೌಲ್ಯಗಳನ್ನು ರೂಪಿಸುವಲ್ಲಿ ಒಟ್ಟಾರೆಯಾಗಿ Bill ರನ್ನು ಪ್ರೇರೇಪಿಸಿದ್ದವು.

Bill ರವರ ಕೆಲಸಗಳು ನವನವೀನವಾಗಿದ್ದು, MOOG ಸಂಸ್ಥೆಗೆ ಅತ್ಯುತ್ತಮ ಪ್ರತಿಭೆಗಳನ್ನು ಆಕರ್ಷಿಸುವ ಸಾಧನಗಳಾದವು. ಇಂತಹ ಪ್ರತಿಭೆಗಳಲ್ಲಿ Bob Brady ಒಬ್ಬರಾಗಿದ್ದು, ಇವರು 1966 ರಲ್ಲಿ ಮೂಗ್ ಸಂಸ್ಥೆಯನ್ನು ಸೇರಿ ಹಂತಹಂತವಾಗಿ ವಿವಿಧ ಉನ್ನತ ಸ್ಥಾನಗಳಿಗೆ ಏರಿ 1988ರಲ್ಲಿ MOOG ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದರು. ಮೂಗ್ ಸಂಸ್ಥೆಯ ಸಂಸ್ಕೃತಿಯ ಬಗೆಗೆ ವಹಿಸಬೇಕಾದ ಎಚ್ಚರಿಕೆ, ಜಾಗೃತ ಪರಿಗಣನೆ, ಪ್ರಾಮುಖ್ಯತೆಯ ಬಗೆಗೆ ಅವರಿಗೆ ಅರಿವಿತ್ತು. ಅವರು ಮೂಗ್ ಸಂಸ್ಥೆಗೆ ಬರಲು ಇದೂ ಒಂದು ಕಾರಣ ಮತ್ತು ಈ ಪುಸ್ತಕದ ಪ್ರಕಟಣೆಗೆ ಇವರು ಮುಖ್ಯ ಪ್ರೇರಕರು. MOOG ನ ಈ ಅನನ್ಯ ಸಂಸ್ಕೃತಿ ಅಸ್ತಿತ್ವದಲ್ಲಿದ್ದರೂ ಸಹ, 2006ರಲ್ಲಿ Bob Brady ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾಗ, ತಮ್ಮ ಊಟದ ಟೇಬಲ್ ನ ಮುಂದೆ ಕುಳಿತಿದ್ದ ಸಂದರ್ಭದಲ್ಲಿ, ಮೂಗ್ ನ ಈ ಮಹತ್ವದ

ಮೌಲ್ಯಗಳು ಪದಗಳಾಗಿ ಅವ್ಯಕ್ತಗೊಂಡವು. ನಾವು ಅತ್ಯಂತ ಮಹತ್ವ ನೀಡುವ ಈ ನಿಧಿಯನ್ನೊಳಗೊಂಡ ಅಂಶಗಳನ್ನು ಪುಸ್ತಕದ ಮೂಲಕ ನೀಡಿದ Bob ಗೆ ವಂದನೆಗಳು.

ಈ ಪುಸ್ತಕದ ಪುಟಗಳಲ್ಲಿ ಬರೆದ ಈ ಮಹತ್ವದ ಮೌಲ್ಯಗಳೇ MOOG ಸಂಸ್ಕೃತಿಗೆ ಭದ್ರ ಬುನಾದಿಗಳಾಗಿವೆ ಎಂಬ ನಂಬಿಕೆ ನನ್ನದು. ಈ ಮೌಲ್ಯಗಳು ನಮ್ಮನ್ನು ನಿಯಂತ್ರಿಸುವ ಕಾನೂನುಗಳಲ್ಲ ಅಥವಾ ತತ್ವ ಸಿದ್ಧಾಂತಗಳ ಮನೋದೃಷ್ಟಿಯಲ್ಲಿ ಮೂಡಿಬಂದಿರುವ ವಾಕ್ಯಗಳ ಪಟ್ಟಿಯಲ್ಲ. ಇವು ನಮ್ಮ ತನ, ನಮ್ಮ ಕಾರ್ಯನಿರ್ವಹಣೆ ಮತ್ತು ಇತರರೊಂದಿಗೆ ನಡೆದುಕೊಳ್ಳುವ ಪ್ರವೃತ್ತಿಯನ್ನು ಬಿಂಬಿಸುವ ಸಂಕೇತಗಳು. ಈ ಮೌಲ್ಯಗಳನ್ನು ಹಂಚಿಕೊಳ್ಳುತ್ತ ಮತ್ತು ಪಾಲನೆ ಮಾಡುತ್ತಾ ತಾವು ಮೂಗ್ ಪರಿವಾರದ ಸದಸ್ಯರಾಗುತ್ತೀರಿ. ತಾವುಗಳು ಸಂಸ್ಥೆಯ ಆಚರಣೆಯ ಮೌಲ್ಯಗಳನ್ನು ರೂಪಿಸಿ ಮತ್ತು ಉಳಿಸಿಕೊಳ್ಳಿ.

ವರ್ಷಗಳುರುಳಿ ನಾವು ಬೆಳೆದಿದ್ದೀವಿ, ವಿಕಸನ ಹೊಂದಿದ್ದೀವಿ ಮತ್ತು ಬದಲಾಗಿದ್ದಿವಿ. ಆದರೆ, ಬದಲಾಗದೇ ಹಾಗೇ ಉಳಿದುಕೊಂಡಿರುವುದೆಂದರೆ ಅದು ಮೂಗ್ ನ ಮಹತ್ವದ ಮೂಲ ಮೌಲ್ಯಗಳು. Bill MOOG ಹುಟ್ಟುಹಾಕಿದ ಈ ಮೌಲ್ಯಗಳೇ ಅತ್ಯಂತ ಪ್ರಜ್ವಲಿತ ಪ್ರತಿಭೆಗಳನ್ನು ಆಕರ್ಷಿಸುವಲ್ಲಿ, ಹಾಗೂ ಇದರೊಂದಿಗೇ ಅತ್ಯುತ್ತಮ ಉದ್ಯೋಗಿಗಳನ್ನು ಸಂಸ್ಥೆಯಲ್ಲಿ ಉಳಿಸಿಕೊಳ್ಳಲು ಕಾರಣವಾಗಿವೆ. ಈ ಕಾರಣವೇ ನಮ್ಮ ಅನೇಕ ಗ್ರಾಹಕರು ಹಾಗೂ ಪಾಲುದಾರರುಗಳಿಗೆ ನಮ್ಮೊಂದಿಗೆ ಕೆಲಸ ಮಾಡಲು ಸುಲಭಸಾಧ್ಯವಾಗಿದೆ ಮತ್ತು ನಾವು ನಿರ್ಮಿಸುವ ಅನೇಕ ಮಹಾನ್ ಉತ್ಪನ್ನಗಳಿಗೆ ತಳಹದಿಯಾಗಿದೆ. ನಮ್ಮ MOOG ಸಂಸ್ಥೆಯು ಯಾವ ತತ್ವದ ಆಧಾರದಮೇಲೆ ನಿರ್ಮಾಣವಾಗಿದೆಯೋ ಆ ತತ್ವಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ನಾನು ಹೆಮ್ಮೆಪಡುತ್ತೇನೆ, ಮತ್ತು ಈ ತತ್ವಗಳೇ ನಮ್ಮನ್ನು ಭವಿಷ್ಯದೆಡೆಗೆ ಮುನ್ನುಗ್ಗಿಸುತ್ತಿವೆ.




John Scannell

**ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ**

**1988 - 2011 - ಹಾಲಿ**

# ನಮ್ಮ ಮೌಲ್ಯಗಳು

ನಂಬಿಕೆ ಅತ್ಯಗತ್ಯ

ಸಾಮರ್ಥ್ಯವೇ ರಾಜ

ನಾವು ಸಮರ್ಥವಾಗಿ ಪ್ರಯತ್ನಿಸುತ್ತೇವೆ

ನಾವೆಲ್ಲರೂ ಇದರಲ್ಲಿ ಒಂದಾಗಿದ್ದೇವೆ

ಇದು ನನ್ನ ಕೆಲಸ

ನಾವು ಪರಿಹಾರಗಳಿಗಾಗಿ ನೋಡುತ್ತೇವೆ, ಬೇರೆಯವರನ್ನು ದೂಷಿಸುವುದಿಲ್ಲ.

ಸಂವಹನ ನಿರ್ಣಾಯಕ

ಔಪಚಾರಿಕತೆ ಸಹಾಯ ಮಾಡದು

ಹೊಂದಿಕೊಳ್ಳಲು ಮತ್ತು ಬದಲಾವಣೆಗೆ ನಾವು ಸಿದ್ಧರಿದ್ದೇವೆ

ಕಾರ್ಯದಕ್ಷತೆ ಮತ್ತು ಬದ್ಧತೆಯನ್ನು ಪುರಸ್ಕರಿಸಬೇಕು

ಕೆಲಸ ಒಂದು ಆನಂದದಾಯಕ ಅನುಭವವಾಗಬೇಕು

ನಿಮ್ಮ ವೈಯಕ್ತಿಕ ಜೀವನ ಬಹಳ ಮಹತ್ವವಾದದ್ದು

# ನಂಬಿಕೆ ಅತ್ಯಗತ್ಯ

ನಾವು ಸಮಗ್ರತೆ ಹಾಗೂ ಪ್ರಾಮಾಣಿಕತೆಗಳನ್ನು ಅತ್ಯುನ್ನತ ಮಾನದಂಡಗಳಾಗಿ ಅಳವಡಿಸಿಕೊಂಡಿದ್ದೇವೆ.

ನಾವು ನಮ್ಮ ಎಲ್ಲ ವೈಯಕ್ತಿಕ ಸಂವಹನೆಗಳಲ್ಲಿ ಪ್ರಾಮಾಣಿಕರಾಗಿದ್ದೇವೆ ಮತ್ತು ಇತರರೂ ಅದೇ ರೀತಿ ಮಾಡುತ್ತಿರುವವರೆಂದು ಪರಿಗಣಿಸುತ್ತೇವೆ.

ನಾವು ಜನರನ್ನು ನ್ಯಾಯೋಚಿತವಾಗಿ ಮತ್ತು ಗೌರವಯುತವಾಗಿ ನಡೆಸಿಕೊಳ್ಳುತ್ತೇವೆ ಮತ್ತು ಪ್ರತಿ ಪರಿಸ್ಥಿತಿಯ ಅನನ್ಯ ಸಂದರ್ಭಗಳನ್ನು ಗುರುತಿಸುತ್ತೇವೆ.

ನಮ್ಮ ತಂಡದ ಸದಸ್ಯರು ಏನು ಹೇಳಿರುತ್ತಾರೋ ಮತ್ತು ಮಾಡಿರುತ್ತಾರೋ ಅದರ ಮೇಲೆ ನಾವು ಅವಲಂಬಿತರಾಗಿದ್ದೇವೆ.

# ಸಾಮರ್ಥ್ಯವೇ ರಾಜ

ನಾವು ನಮ್ಮ ಕೆಲಸಗಳಲ್ಲಿ ಅಪ್ರತಿಮರಾಗಿರಬೇಕು.

ನಾವು ಮಾಡುವ ಕೆಲಸದಲ್ಲಿ ನಮ್ಮ ಅತ್ಯುತ್ತಮ ಸಾಮರ್ಥ್ಯವನ್ನು ಪ್ರದರ್ಶಿಸುವ ಮೂಲಕ ನಾವು ಪರಸ್ಪರ ನಂಬಿಕೆ ಮತ್ತು ಗೌರವಗಳನ್ನು ಗಳಿಸುತ್ತೇವೆಯೇ ಹೊರತು, ಯಾವುದೇ ಪದವಿ, ಶೀರ್ಷಿಕೆ, ವೇತನ ಶ್ರೇಣಿಯಿಂದಲ್ಲ ಅಥವಾ ನಾವು ಯಾರನ್ನು ಬಲ್ಲೆವು ಎಂಬುದರಿಂದಲ್ಲ.

ಒಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಾಗ, ಉತ್ತಮ ಪರಿಹಾರ ಮುಖ್ಯವೇ ಹೊರತು, ಹಿಂದಿನದರ ಬಗೆಗೆ ಚಿಂತಿಸುವುದಲ್ಲ ಎಂಬುದು ನಮ್ಮ ನಂಬಿಕೆ.

# ನಾವು ಸಮರ್ಥವಾಗಿ ಪ್ರಯತ್ನಿಸುತ್ತೇವೆ

---

ನಾವು ಪ್ರತಿದಿನವೂ ನಮ್ಮ ಸಂಪೂರ್ಣ ಹಾಗೂ ಗರಿಷ್ಟ ಪ್ರಯತ್ನವನ್ನು ಮಾಡುತ್ತೇವೆ.

ನಾವು ಉದ್ದೇಶಗಳಿಗೆ ಹಾಗೂ ತುರ್ತು ಪ್ರಜ್ಞೆಗೆ ಗಮನವನ್ನು
ನೀಡುತ್ತೇವೆ.

ಕೆಲಸವನ್ನು ಪೂರ್ಣಗೊಳಿಸುವ ಸಲುವಾಗಿ ಅಗತ್ಯವಾದುದನ್ನು ಮಾಡಲು ನಾವು ಸಿದ್ಧರಿದ್ದೇವೆ
ಮತ್ತು ಇತರರೂ ಇದೇ ರೀತಿ ಮಾಡುತ್ತಿದ್ದಾರೆಂದು ನಾವು ನಂಬುತ್ತೇವೆ.

"ಸರಿಯಾದದ್ದನ್ನು" ಮಾಡುವುದು ಮುಖ್ಯವೇ ಹೊರತು, ನಮ್ಮ ಮೌಲ್ಯಗಳನ್ನು
ರಾಜಿ ಮಾಡಿಕೊಂಡು ಸುಲಭ ಮಾರ್ಗದಲ್ಲಿ ಸಾಗುವುದಲ್ಲ
ಎಂಬುದನ್ನು ನಾವು ನಂಬಿದ್ದೇವೆ.

# ನಾವೆಲ್ಲರೂ ಇದರಲ್ಲಿ ಒಂದಾಗಿದ್ದೇವೆ

"ಒಂದು MOOG" ಎಂಬ ಪರಿಗಣನೆಯಲ್ಲಿ ನಾವು ನಮ್ಮ ಯಶಸ್ಸು ಹಾಗೂ ಸವಾಲುಗಳನ್ನು ಹಂಚಿಕೊಳ್ಳುತ್ತೇವೆ

ನಮ್ಮ ಸಂಸ್ಥೆಯ ಯಶಸ್ಸನ್ನು ನಮ್ಮ ಇಡೀ ತಂಡದ ಶ್ರಮದ ಫಲ ಎಂದು ನಾವು  ಗುರುತಿಸುತ್ತೇವೆ.

ನಾವು ನಮ್ಮ ಸಾಮರ್ಥ್ಯದ ಅತ್ಯುತ್ತಮ ಸಹಯೋಗ ಹಾಗೂ ಕೊಡುಗೆಗಳನ್ನು ನೀಡುತ್ತೇವೆ

ನಾವು ಬಾಂಧವ್ಯಗಳನ್ನು ವೃದ್ಧಿಸುತ್ತೇವೆ ಏಕೆಂದರೆ, ಇವೇ ನಮ್ಮ
ತಂಡದ ಯಶಸ್ಸಿಗೆ ನಿರ್ಣಾಯಕ ಎಂಬುದನ್ನು ನಾವು ಅರಿತಿದ್ದೇವೆ.

ವ್ಯಕ್ತಿ-ವ್ಯಕ್ತಿಗಳ ನಡುವಣ ಭಿನ್ನತೆಗಳನ್ನು ನಾವು ಗೌರವಿಸುತ್ತೇವೆ ಮತ್ತು,
ಪ್ರತಿಯೊಬ್ಬರೂ ನೀಡಬಹುದಾದ ಪ್ರತ್ಯೇಕ ಕೊಡುಗೆಗಳನ್ನು ನಾವು ಗುರುತಿಸುತ್ತೇವೆ.

ನಮ್ಮ ಸಂಸ್ಥೆಯ ಹೆಚ್ಚಿನ ಒಳಿತಿಗಾಗಿ, ಯಶಸ್ಸನ್ನು ಸಾಧಿಸಲು ನಾವು ಪ್ರೇರೇಪಿತರಾಗಿದ್ದೇವೆ,
ಏಕೆಂದರೆ, ಸಂಸ್ಥೆಯ ಯಶಸ್ಸು MOOGನ ಎಲ್ಲ ಉದ್ಯೋಗಿಗಳಿಗೆ ಹೆಚ್ಚಿನ ಅವಕಾಶಗಳನ್ನು
ನೀಡುತ್ತದೆ ಎಂಬುದನ್ನು ನಾವು ಅರಿತಿದ್ದೇವೆ.

ಬೇರೆಯವರ ಶ್ರಮದ ವೆಚ್ಚದಲ್ಲಿ ನಮ್ಮನ್ನು ನಾವು ಚೆನ್ನಾಗಿ
ಕಾಣುವಂತೆ ಬಿಂಬಿಸಿಕೊಳ್ಳುವುದಿಲ್ಲ.

# ಇದು ನನ್ನ ಕೆಲಸ

ಒಂದು ಕೆಲಸವನ್ನು ಪೂರ್ಣಗೊಳಿಸಲು ನಾವು ನಮ್ಮ ಹೆಜ್ಜೆಯನ್ನು ಮುಂದಿಟ್ಟು ಸಾಗುತ್ತೇವೆ
ಅದು ನಮ್ಮ ಕೆಲಸದ ಭಾಗವಾಗಿರಲಿ, ಅಥವಾ ಇಲ್ಲದಿರಲಿ.

ಗುಣಮಟ್ಟದ ಉತ್ಪನ್ನಗಳು ಅಥವಾ ಸೇವೆಗಳನ್ನು ಸರಿಯಾದ ಸಮಯಕ್ಕೆ ನೀಡುವಲ್ಲಿ ನಮ್ಮ ಭಾಗದ
ಸಾಧನೆಗಾಗಿ ನಾವು ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ.

ಅಲ್ಪ ನಿರ್ದೇಶನದೊಂದಿಗೆ ಅಥವಾ ನಿರ್ದೇಶನರಹಿತರಾಗಿ
ನಾವು ನಮ್ಮ ಜವಾಬ್ದಾರಿಗಳಿಗೆ ಬದ್ಧರಾಗಿದ್ದೇವೆ.

ನಮಗೆ ಅಗತ್ಯವಾದಾಗ ನಾವು ಸಹಾಯವನ್ನು ಪಡೆಯುತ್ತೇವೆ
ಮತ್ತು ಪ್ರತಿಯಾಗಿ ನಾವೂ ಅದನ್ನು ಮರಳಿ ನೀಡುತ್ತೇವೆ.

# ನಾವು ಪರಿಹಾರಗಳಿಗಾಗಿ ನೋಡುತ್ತೇವೆ, ಬೇರೆಯವರನ್ನು ದೂಷಿಸುವುದಿಲ್ಲ

ಸಮಸ್ಯೆಯನ್ನು ಪರಿಹರಿಸುವುದು ಮುಖ್ಯವೇ ಹೊರತು ಇತರರನ್ನು
ದೂಷಿಸುವುದಲ್ಲ ಎಂಬುದನ್ನು ನಾವು ನಂಬುತ್ತೇವೆ.

ಜನರು ಸಮರ್ಥರಾಗಿದ್ದಾರೆ ಮತ್ತು ಅವರು ತಮ್ಮ ಹೆಚ್ಚಿನ ಶ್ರಮವನ್ನು ವಹಿಸಿ ಕರ್ತವ್ಯ
ನಿರ್ವಹಿಸುತ್ತಾರೆ ಮತ್ತು ವಿಷಯಗಳು ನಮ್ಮ ಯೋಜನೆಯಂತೆ ಸಾಗದಿದ್ದಾಗ ಅದಕ್ಕೆ ಪರಿಹಾರ
ಕಂಡುಕೊಳ್ಳುವತ್ತ ಗಮನಹರಿಸುವುದೊಂದೇ ಸರಿಯಾದ ಮಾರ್ಗವೆಂದು ನಾವು ನಂಬಿದ್ದೇವೆ.

ಪರಿಹಾರಗಳನ್ನು ಕಂಡುಕೊಳ್ಳಲು ನಾವು ಸಹಯೋಗದೊಂದಿಗೆ ಕರ್ತವ್ಯ ನಿರ್ವಹಿಸುತ್ತೇವೆ.

ಸಾಹಸೀ ನಿಲುವುಗಳನ್ನು ತಾಳದೇ ನಮ್ಮ ಗ್ರಾಹಕರ ಅತ್ಯಂತ ಕಠಿಣ ಸವಾಲುಗಳನ್ನು
ಪರಿಹರಿಸುವುದು ಸಾಧ್ಯವಿಲ್ಲ ಎಂಬುದು ನಮಗೆ ತಿಳಿದಿದೆ.

ಪ್ರಯತ್ನ, ವೈಫಲ್ಯ, ಕಲಿಕೆ ಮತ್ತು ಯಶಸ್ವಿಯಾಗಲು
ನಾವು ಪರಸ್ಪರ ಇತರರಿಗೆ ಅವಕಾಶಗಳನ್ನು ನೀಡುತ್ತೇವೆ.

# ಸಂವಹನ ನಿರ್ಣಾಯಕ

ನಮ್ಮ ಹುದ್ದೆಗಳು ಯಾವುದೇ ಆಗಿರಲಿ, ವಿಶ್ವಾಸಾರ್ಹ ಸಂಬಂಧಗಳನ್ನು ಮುಕ್ತ ಮನೋಭಾವ, ಪ್ರಾಮಾಣಿಕತೆ ಮತ್ತು ಪರಿಪೂರ್ಣ ಸಂವಹನೆಯ ಮೂಲಕ ಬೆಸೆಯಲು ಸಾಧ್ಯ ಎಂಬುದು ನಮ್ಮ ನಂಬಿಕೆ.

ಪೂರ್ವಭಾವಿಯಾಗಿ ಮಾಹಿತಿಗಳನ್ನು ಹಂಚಿಕೊಳ್ಳುವುದು ಮತ್ತು ಜನರನ್ನು ಸಂಪೂರ್ಣ ಅರಿವಿನಲ್ಲಿರಿಸುವಂತಹ ಮಾರ್ಗವು ಉದ್ಯೋಗಿಯ ಬದ್ಧತೆಗೆ ಗಣನೀಯ ಪರಿಣಾಮ ಉಂಟುಮಾಡುತ್ತದೆಂಬುದನ್ನು ನಾವು ಅರಿತಿದ್ದೇವೆ.

ಸಂವಹನವೆಂದರೆ ಮಾತನಾಡುವುದು ಮತ್ತು,
ಬಹು ಮುಖ್ಯವಾದುದೆಂದರೆ ಕೇಳುವುದು ಎಂಬುದನ್ನು ನಾವು ಬಲ್ಲೆವು.

# ಔಪಚಾರಿಕತೆ ಸಹಾಯ ಮಾಡದು

ನಾವು ನಮ್ಮ ಸಂಸ್ಥೆಯಲ್ಲಿ, ಪ್ರತಿಯೊಬ್ಬರನ್ನೂ - ಅವರ ಹುದ್ದೆಗಳನ್ನು
ಲೆಕ್ಕಿಸದೇ ಸಮಾನ ಗೌರವದೊಂದಿಗೆ ಕಾಣುತ್ತೇವೆ.

ಪರಸ್ಪರ ಬಾಂಧವ್ಯ ಹಾಗೂ ಪೋಷಕ ಸಹಯೋಗಗಳ ವೃದ್ಧಿಗೆ ಅನೌಪಚಾರಿಕ
ಮಾತುಕತೆಗಳು ಸಹಾಯಕವಾಗುತ್ತವೆ ಎಂಬುದು ನಮಗೆ ತಿಳಿದಿದೆ.

ನಾವು ಔಪಚಾರಿಕತೆಗೆ ಹೆಚ್ಚಿನ ಆದ್ಯತೆ ನೀಡದೆ, ಸಹಜ ಹಾಗೂ ಮುಕ್ತವಾಗಿರುತ್ತೇವೆ.

ನಾವು ಎಲ್ಲರಿಗೂ ನಿಲುಕುವವರಾಗಿದ್ದೇವೆ.

ಅಧಿಕಾರಶಾಹೀ ಪ್ರವೃತ್ತಿ ಹಾಗೂ ಅನಗತ್ಯ ದಸ್ತಾವೇಜುಗಳನ್ನು ನಾವು ತಪ್ಪಿಸುತ್ತೇವೆ.

# ಹೊಂದಿಕೊಳ್ಳಲು ಮತ್ತು ಬದಲಾವಣೆಗೆ ನಾವು ಸಿದ್ಧರಿದ್ದೇವೆ

ನಮ್ಮ ಸಂಸ್ಥೆಯು ಸ್ಪರ್ಧಾತ್ಮಕವಾಗಿರಲು ನಮ್ಮ ಸುತ್ತಲಿನ ವಿಶ್ವದೊಂದಿಗೆ ನಾವೂ ಸಹ ಬದಲಾಗಬೇಕು ಮತ್ತು ವಿಕಸನಗೊಳ್ಳಬೇಕು ಎಂಬುದನ್ನು ನಾವು ನಂಬುತ್ತೇವೆ.

ಬದಲಾವಣೆ ಅಗತ್ಯವೆನಿಸಿದಾಗ, ಅದಕ್ಕೆ ತಕ್ಕನಾಗಿ ಪ್ರತಿಫಲಿಸಲು ಮತ್ತು ಗುರುತಿಸಲು ನಾವು ಅತ್ಯುತ್ತಮವಾಗಿ ಕಾರ್ಯಗತರಾಗುತ್ತೇವೆ.

ನಮ್ಮ ಎಲ್ಲ ಕೆಲಸಕಾರ್ಯಗಳಲ್ಲಿ ನಿರಂತರ ಸುಧಾರಣೆ ಅಗತ್ಯ ಎಂಬುದನ್ನು ಅರಿತಿದ್ದೇವೆ.

# ಕಾರ್ಯದಕ್ಷತೆ ಮತ್ತು ಬದ್ಧತೆಯನ್ನು ಪುರಸ್ಕರಿಸಬೇಕು

ಕಾರ್ಯದಕ್ಷತೆ ಮತ್ತು ನಿಷ್ಠೆಯ ಗುರುತಿಸುವಿಕೆ - ನಾವು ಯಾರು ಎಂಬುದನ್ನು ಸೂಚಿಸುವ ಮುಖ್ಯ ಅಂಶ ಎಂಬುದನ್ನು ನಾವು ತಿಳಿದಿದ್ದೇವೆ.

ನಮ್ಮ ಸಂಸ್ಥೆಯು ಯಶಸ್ವಿಯಾಗಿದ್ದಾಗ, ಸಂಸ್ಥೆಯ ಉದ್ಯೋಗಿಗಳು ಈ ಯಶಸ್ಸನ್ನು ಹಂಚಿಕೊಳ್ಳಲು ಅವಕಾಶ ಹೊಂದಿರಬೇಕೆಂಬ ನೀತಿಯನ್ನು ನಾವು ನಂಬಿದ್ದೇವೆ.

ನಮ್ಮ ಸಂಸ್ಥೆಯೊಂದಿಗೆ ನಮ್ಮ ಉದ್ಯೋಗಿಗಳು ಕಾಪಾಡಿಕೊಂಡುಬಂದಿರುವ ತಮ್ಮ ದೀರ್ಘಕಾಲಿಕ ಬದ್ಧತೆಗಳನ್ನು ನಾವು ಸಂಭ್ರಮದಿಂದ ಆಚರಿಸುತ್ತೇವೆ.

ಪ್ರತಿಯೊಬ್ಬ ವ್ಯಕ್ತಿಯೂ ಅತ್ಯಮೂಲ್ಯ ಕೊಡುಗೆ ನೀಡುವ MOOG ಕುಟುಂಬದ ಸದಸ್ಯ ಎಂದು ನಾವು ದೃಢವಾಗಿ ನಂಬಿದ್ದೇವೆ.

# ಕೆಲಸ ಎಂಬುದು ಒಂದು ಆನಂದದಾಯಕ ಅನುಭವವಾಗಿರಬೇಕು

ತಮ್ಮ ಕೆಲಸದ ಬಗ್ಗೆ ಜನರು ಭಾವೋದ್ರಿಕ್ತರಾಗಿರಬೇಕೆಂದು ನಾವು ಬಯಸುತ್ತೇವೆ ಮತ್ತು ಜನರು ಸರಾಗವಾಗಿದ್ದಾಗ ಮತ್ತು ತಾವೇ ತಾವಾಗಿ ಆನಂದದಿಂದಿದ್ದಾಗ ಹೆಚ್ಚು ಉತ್ಪಾದಕರಾಗಿರುತ್ತಾರೆಂದು ನಾವು ನಂಬಿದ್ದೇವೆ.

ಖುಷಿಪಡುವುದನ್ನು ನಾವು ನಂಬುತ್ತೇವೆ ಮತ್ತು ನಮ್ಮನ್ನು ನಾವು ತುಂಬಾ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ.

ನಾವು ನಮ್ಮ ದನಿ ಏರಿಸಿ ಬಿರುಸಾಗಿ ಮಾತನಾಡುವುದರಿಂದ ಅಥವಾ ನಮ್ಮ ಆಕ್ರಮಣಕಾರೀ ವರ್ತನೆಯಿಂದ ಕೆಲಸಗಳೇನೋ ಆದಂತಾಗುತ್ತದೆ, ಆದರೆ ಅದು ಆನಂದದಹೊರತಾಗಿ ಎಂಬುದನ್ನು ನಾವು ಅರಿತಿದ್ದೇವೆ.

# ನಿಮ್ಮ ವೈಯಕ್ತಿಕ ಜೀವನ ಬಹಳ ಮಹತ್ವವಾದದ್ದು

ಪ್ರತಿಯೊಬ್ಬ ವ್ಯಕ್ತಿಯ ಮತ್ತು ಸಂಸ್ಥೆಯ ದೀರ್ಘಕಾಲಿಕ ಒಳಿತಿಗೆ:
ಕೆಲಸ-ಜೀವನದ ಸಮತೋಲನ ಅತ್ಯಗತ್ಯ ಎಂಬುದು ನಮ್ಮ ನಂಬಿಕೆ.

ಉದ್ಯೋಗಿಯು ತೃಪ್ತಿಕರ ಹಾಗೂ ಲಾಭದಾಯಕ
ವೈಯಕ್ತಿಕ ಜೀವನ ಹೊಂದಬೇಕೆಂದು ನಾವು ಅಪೇಕ್ಷಿಸುತ್ತೇವೆ ಮತ್ತು
ಇದಕ್ಕಾಗಿ ಸಾಧ್ಯವಾದಾಗಲೆಲ್ಲ ನಾವು ಹೊಂದಿಕೊಳ್ಳುತ್ತೇವೆ.

ಜನರು ರಜೆ ಮತ್ತು ವಿರಾಮಗಳನ್ನು ತೆಗೆದುಕೊಳ್ಳಲೇಬೇಕು ಮತ್ತು ತಾವು ಪ್ರೀತಿಸುವ
ಚಟುವಟಿಕೆಗಳನ್ನು ಮಾಡುತ್ತಾ ಕಾಲ ಕಳೆಯಬೇಕೆಂಬುದು ನಮ್ಮ ನಂಬಿಕೆ.

ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ಆದ್ಯತೆಗಳು, ಸಮಸ್ಯೆಗಳು
ಮತ್ತು ಅವಕಾಶಗಳನ್ನು ನಾವು ಪರಿಗಣಿಸುತ್ತೇವೆ.

"ನಮ್ಮ ಮೌಲ್ಯಗಳೊಂದಿಗೆ ಜೀವಿಸುವುದು ಮತ್ತು ಆ ಮೌಲ್ಯಗಳನ್ನು ನಮ್ಮ ಮುಂದಿನ ಪೀಳಿಗೆಗಳೊಂದಿಗೆ ಕೊಂಡೊಯ್ಯಬೇಕಾದುದು ನಮಗೆ ಸಂಬಂಧಿಸಿದ ವ್ಯೆಯುಕ್ತಿಕ ವಿಚಾರ. ಆದರೆ, ಮೂಗ್ ಕುಟುಂಬದ ಸದಸ್ಯರಾಗಿರುವುದರಿಂದ, ನಮ್ಮ ಸಂಸ್ಕೃತಿಯ ಪ್ರಭುತ್ವವನ್ನು ಒಟ್ಟಾರೆಯಾಗಿ ಹೊಂದುವುದು ನನ್ನ ಜವಾಬ್ದಾರಿ ಮತ್ತು ನಿಮ್ಮದೂ ಸಹ."

John Scannell

MOOG

© 2019 MOOG Inc, ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ

500-581 0619